ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/02/2019-20

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 23.08.2019

**ಸುತ್ತೋಲೆ**

ವಿಷಯ: ರಾಷ್ಟ್ರೀಯ ಸೇವಾ ಯೋಜನೆಯ ಸುವರ್ಣಮಹೋತ್ಸವವನ್ನು ಆಚರಿಸುವ ಬಗ್ಗೆ,
ಉಲ್ಲೇಖ : ರಾಜ್ಯ ಎನ್.ಎಸ್.ಎಸ್.ಅಧಿಕಾರಿಯವರ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/37/2018-19/203 ದಿನಾಂಕ: 17.07.2019 ಹಾಗೂ 29.07.19

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ 2019ರ ಸೆಪ್ಟೆಂಬರ್ 24 ರಂದು ರಾಷ್ಟ್ರೀಯ ಸೇವಾ ಯೋಜನೆಯು ಸ್ಥಾಪನೆಗೊಂಡು 50 ವರ್ಷ ಪೂರ್ಣಗೊಳ್ಳುವುದರಿಂದ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿರುವ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಸುವರ್ಣಮಹೋತ್ಸವವನ್ನು ತಮ್ಮ ಸಂಸ್ಥೆಗಳಲ್ಲಿ ದಿನಾಂಕ: 20-09-2019 ರಿಂದ ದಿನಾಂಕ: 24-09-2019 ರ ವರೆಗೆ ಈ ಕೆಳಕಂಡತೆ ಚಟುವಟಿಕೆಯ ಕಾರ್ಯಕ್ರಮಗಳು ಹಮ್ಮಿಕೊಳ್ಳುವುದು. ಹಮ್ಮಿಕೊಂಡ ಕಾರ್ಯಕ್ರಮದ ವರದಿಯನ್ನು ರಾ.ಸೇ.ಯೋ ಕಛೇರಿಗೆ ದಿನಾಂಕ: 30-09-2019 ರೊಳಗೆ ಅಂಚೆ ಮೂಲಕ ಕಳುಹಿಸಲು ಸೂಚಿಸಲಾಗಿದೆ.

1. ಭಾವೈಕ್ಯತಾ ಕಾರ್ಯಕ್ರಮ, ಸ್ಪರ್ಧೆಗಳು, ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸುವುದು.
2. ಎನ್.ಎಸ್.ಎಸ್. ಗಾಗಿ ದುಡಿದ ಪರಿಸರದ ಹಿರಿಯರನ್ನು ಗೌರವಿಸುವುದು.
3. ರಾಜ್ಯ/ರಾಷ್ಟ್ರ ಪ್ರಶಸ್ತಿ ವಿಜೇತರನ್ನು ತಮ್ಮ ಸಂಸ್ಥೆಯ ಮಟ್ಟದಲ್ಲಿ ಗೌರವಿಸುವುದು.
4. ಸುವರ್ಣಮಹೋತ್ಸವದ ನೆನಪಿಗಾಗಿ ಯಾವುದಾದರೊಂದು ಸ್ಥಿರ ಆಸ್ತಿಯನ್ನು ನಿರ್ಮಿಸುವುದು. (ಬಸ್ ತಂಗುದಾಣ ನಿರ್ಮಾಣ/ಕಾಲೇಜು ಸೈಕಲ್ ಸ್ಟ್ಯಾಂಡ್ ಇತ್ಯಾದಿ)
5. ಸುವರ್ಣಮಹೋತ್ಸವದ ನೆನಪಿಗಾಗಿ ರಕ್ತದಾನ/ಅರಿವು ಕಾರ್ಯಕ್ರಮ ಏರ್ಪಡಿಸುವುದು ಹಾಗೂ ಯಶಸ್ವಿ ಕಥೆಗಳನ್ನು ಯುವಕರಿಗೆ ತಿಳಿಯಪಡಿಸುವುದು .

ನಿರ್ದೇಶಕರು.

**ಇವರಿಗೆ,** ರಾಜ್ಯದ ಎಲ್ಲಾ ಸರ್ಕಾರಿ /ಅನುದಾನಿತ/ಖಾಸಗಿ, ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ -ಸೂಕ್ತ ಕ್ರಮಕ್ಕಾಗಿ

**ಪ್ರತಿ:** 1) ರಾಜ್ಯ ಎನ್ ಎಸ್ ಎಸ್ ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು ರಾಷ್ಟ್ರೀಯ ಸೇವಾ ಯೋಜನೆ ಕೋಶ,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. ಬೆಂಗಳೂರು-01
2) ಇ-ಆಡಳಿತ ವಿಭಾಗಕ್ಕೆ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು
3) ಕಛೇರಿ ಪ್ರತಿ.

ಕಾಲೇಜುಗಳಲ್ಲಿ ಸುವರ್ಣ ಮಹೋತ್ಸವ / Golden Jubilee @ polytechnic